(ಗೊಂದಲ —)

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ಇಲ್ಲಿ ಎರಡು ವಿಚಾರವಿದೆ, ಮೊದಲನೆಯದಾಗಿ ಅವರಿಗೆ ರಕ್ಷಣೆ ಕೊಡತಕ್ಕದ್ದು, ಎರಡನೆಯದಾಗಿ ಆಸ್ತಿಯ ವಿಚಾರ. ರಕ್ಷಣೆ ಕೊಡುವ ವಿಚಾರವನ್ನು ಮಾನ್ಯ ಮಂತ್ರಿಗಳವರು ಹೇಳಿದ್ದಾರೆ, ಎರಡನೆಯದಾಗಿ ಆಸ್ತಿಯ ವಿಚಾರದಲ್ಲಿ ಈಗಾಗಲೇ ಹೈಕೋರ್ಟಿನಲ್ಲಿ ಇವರ ಪರವಾಗಿಯೇ ಆಗಿದೆ. ಆದರೆ ಇವರು ಆಲ್ಲಿಗೆ ಆಸ್ತಿ ಕೇಳಲು ಹೋದರೆ ಹೊಡೆಯುತ್ತಾರೆ ಎನ್ನುವ ಭಯಭೀತಿ ಬಂದಿದೆ. ಇದರಲ್ಲಿ ಕಂದಾಯ ಮಂತ್ರಿಗಳವರ ಮೇಲೆ ಆಪಾದನೆ ಬಂದಿದೆ.... ತೊಂದರೆಗೊಳಗಾಗಿರತಕ್ಕವರು ಇಲ್ಲಿಗೆ ಬಂದಿದ್ದಾರೆ.

ಅಧ್ಯಕ್ಷರು. — ರಕ್ಷಣೆಯ ವಿಚಾರವಾಗಿ ಈಗಾಗಲೇ ಮಂತ್ರಿಗಳವರು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಆಗಲೇ ಹೇಳಿದೆ ಅದನ್ನು ಅವರು ಕೇಳಿಸಿಕೊಂಡರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಏನು ಹೇಳಿದರು ಎಂದರೆ....

ಅಧ್ಯಕ್ಷರು.— ಈಗಾಗಲೇ ಅದರ ಬಗ್ಗೆ ಹೇಳಿದ್ದಾರೆ ಪುನಃ ಹಿಂದಕ್ಕೆ ಹೋಗುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಈ ವಿಚಾರ ಪ್ರಸ್ತಾಪವಾದಾಗ ನಾನು ಸದನದಲ್ಲಿ ಇರಲಿಲ್ಲ, ಅದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಬೇರೆ ಮಹತ್ವದ ಸಭೆ ಇತ್ತು ನಾನು ಅಲ್ಲಿಗೆ ಹೋಗಿದ್ದೆ. ಈಗ ಮಾನ್ಯ ಸದಸ್ಯರುಗಳು ಪ್ರಸ್ತಾಪಮಾಡಿ ಹೇಳಿರತಕ್ಕದ್ದರಲ್ಲಿ ಎರಡು ಸ್ಪಷ್ಟವಾದ ಬೇಡಿಕೆಗಳು ಇವೆ. ಒಂದು ಆಸ್ತಿಗೆ ಸಂಬಂಧಪಟ್ಟಿದ್ದು. ಆಸ್ತಿ ಯಾರಿಗೆ ಹೋಗಬೇಕು ಬಿಡಬೇಕು ಎಂದು ತೀರ್ಮಾನ ಮಾಡತಕ್ಕವರು ನಾವಲ್ಲ. ಅದಕ್ಕೆ ಹೈಕೋರ್ಟಿದೆ, ಸುಪ್ರೀಂಕೋರ್ಟಿದೆ. ಅಲ್ಲಿಗೆ ಹೋಗಿ ತೀರ್ಮಾನಪಡೆದುಕೊಳ್ಳಬೇಕಾಗುತ್ತದೆ. ಎರಡೂ ಪಕ್ಷಗಳವರಿಗೂ ಸಹ ನಾವು ಪ್ರಾಣದ ಭಯ ಇಲ್ಲದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ. ಇನ್ನು ಎರಡನೆಯದಾಗಿ ಮಾನ್ಯ ಬಂಗಾರಪ್ಪನವರು ಹೇಳಿದರು ಅವರು ಇಲ್ಲಿಗೆ ಬಂದಿದ್ದಾರೆ ಎಂದು. ಅವರನ್ನು ಡಿ.ಜಿ.ಪಿ.ಯವರ ಹತ್ತಿರ ಕಳುಹಿಸಿಕೊಟ್ಟರೆ ಅವರು ಅವರೊಡನೆ ಕುಳಿತುಕೊಂಡು ಮಾತನಾಡಿ, ಅವರ ತೊಂದರೆ ಏನಿದೆ ಅದನ್ನು ಕೇಳಿ ಕಾಯಿದೆ ಪ್ರಕಾರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು.— ಈಗ ಆ ವಿಷಯ ಇಲ್ಲಿಗೆ ಮುಗಿಯಿತು. ಇನ್ನು ಇವತ್ತು ನಿಯಮ 334ರ ಕೆಳಗೆ 24 ವಿಷಯಗಳು ಬಂದಿವೆ. ಇದು ದಿನೇ ದಿನೇ ಹೆಚ್ಚು ಹೆಚ್ಚಾಗುತ್ತಿದೆ.

ನಿಯಮ 334ರ ಮೇರೆಗೆ.

1. ವಿಷಯ : ಬೆಂಗಳೂರು ನಗರದಲ್ಲಿ ಕಾಲರಾ ಮತ್ತು ಕರುಳುಬೇನೆ ಪ್ರಕರಣಗಳು.

ಶ್ರೀ ಪಿ. ರಾಂದೇವ್ (ಮಲ್ಲೇಶ್ವರ).— ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಕಾಲರ ಬೇನೆ ಬಂದು ಅದು ಎಲ್ಲಾ ಕಡೆಗಳಿಗೂ ಹರಡುತ್ತಿದೆ ಎಂದು ತಿಳಿದುಬಂದಿದೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಏನು ಮುಂಜಾಗ್ರತಿ ಕ್ರಮವನ್ನು ಕೈಗೊಂಡಿದ್ದಾರೆ ಎಂಬುದನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಹಾಗೆ ಕಾಲರ ಬೇನೆ ಯಾವುದೂ ಕಾಣಿಸಿಕೊಂಡಿಲ್ಲ. ಗ್ಯಾಸ್ಟ್ರೊ ಎನ್‌ಟೈಟೀಸ್ ಇದೆ ಎನ್ನುವುದು ಗೊತ್ತಾಗಿದೆ. ಇದರ ಬಗ್ಗೆ ಈಗಾಗಲೇ ಕ್ರಮವನ್ನು ಕೈಗೊಂಡಿದ್ದೇವೆ. ಮತ್ತೆ ಯಾವುದೇ ಹಣ್ಣುಗಳನ್ನು ಕತ್ತರಿಸಿ ರಸ್ತೆಗಳಲ್ಲಿ ಮಾರಾಟ ಮಾಡಬಾರದು ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಣೆ ಕೂಡ ಮಾಡಲಾಗಿದೆ. ಕಾಲರ ಎನ್ನುವ ಬಗ್ಗೆ ಯಾವುದೇ ಕೇಸ್ ಸಹ ಆಸ್ಪತ್ರೆಗಳಿಗೆ ಇಲ್ಲಿಯವರೆಗೆ ಬಂದಿಲ್ಲ.

(ಉಪಾಧ್ಯಕ್ಷರಾದ ಶ್ರೀ ವೀರಣ್ಣನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

2. ವಿಷಯ ; ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ತಾಲ್ಲೂಕು ಬನ್ನಾಡಿ ಗ್ರಾಮದ ಪರಮಹಂಸ ಹೈಯರ್ ಪ್ರೈಮರಿ ಸ್ಕೂಲ್ ಉಪಾಧ್ಯಾಯರಿಗೆ ಇನ್‌ಕ್ರಿಮೆಂಟ್ ಇತ್ಯಾದಿ ದೊರೆಯದಿರುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಬ್ರಹ್ಮಾವರ ಕ್ಷೇತ್ರದ ಪರಮಹಂಸ ಕಿರಿಯ ಪ್ರಾಥಮಿಕ ಶಾಲೆ, ಬನ್ನಾಡಿ ಇಲ್ಲಿಗೆ ಸಂಚಾಲಕರ ನೇಮಕಾತಿಯು ಕಳೆದ

2-3 ವರ್ಷಗಳಿಂದ ಆಗದೆ ಆ ಶಾಲೆಯ ಅಧ್ಯಾಪಕರುಗಳಿಗೆ ಇಂಕ್ರಿಮೆಂಟ್ ರಜೆ ಸಂಬಳವಿಲ್ಲದೆ ಕಳೆದ ಎರಡು ವರ್ಷಗಳಿಂದ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಮತ್ತು ಈ ಶಾಲಾ ಮುಖ್ಯ ಉಪಾಧ್ಯಾಯರು ಈ ತಿಂಗಳಲ್ಲಿ ನಿವೃತ್ತಿ ಆಗಲಿರುವುದರಿಂದ ಅವರಿಗೆ ತೊಂದರೆಯಾಗಲಿದ್ದು ಈ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದಾಗ್ಯೂ ಸಹ ಯಾವ ಪ್ರಯೋಜನವೂ ಆಗದೆ ಇರುವುದರಿಂದ ಇದರ ಬಗ್ಗೆ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಂಪೂರ್ಣವಾದ ವಿವರಗಳನ್ನು ತರಿಸಿಕೊಂಡು ಅವರ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

3. ವಿಷಯ : ಅನುಚಿತ ವರ್ತನೆಗಾಗಿ ಭಟ್ಕಳ ಪೊಲೀಸ್ ಠಾಣೆಯ ಎ.ಎಸ್.ಐ. ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಳ).— ಮಾನ್ಯ ಅಧ್ಯಕ್ಷರೇ, ಭಟ್ಕಳ್ ಪೋಲೀಸ್ ಸ್ಟೇಷನ್ನಿನ ಎ.ಎಸ್.ಐ.ರವರು ತಾ. 14-3-84ರಂದು ಮಾಸ್ತಿ ಅಣ್ಣಪ್ಪ ನಾಯಕ್ ಎನ್ನುವವರ ಮನೆಗೆ ರಾತ್ರಿ 10 ಗಂಟೆಗೆ ಹೋಗಿ ಅವರನ್ನು ಅರೆಸ್ಟ್ ಮಾಡಿಕೊಂಡು ಬೀದಿಯಲ್ಲಿ ಥಳಿಸುತ್ತಾ ಹೋಗುತ್ತಿದ್ದರು. ಆಗ ಅಲ್ಲಿದ್ದ ಜನ ಅವರನ್ನು ರಾತ್ರಿ ಕರೆದುಕೊಂಡು ಹೋಗುವುದು ಬೇಡ ಬೆಳಿಗ್ಗೆ ನಾವೇ ಕರೆದುಕೊಂಡು ಬಂದು ಪೋಲೀಸ್ ಸ್ಟೇಷನ್ನಿಗೆ ಬಿಡುತ್ತೇವೆ ಎಂದು ಹೇಳಿದರೂ ಸಹ ಕೇಳದೇ ಕರೆದುಕೊಂಡು ಹೋಗಿದ್ದಾರೆ. ಅನಂತರ ಆ ಊರಿನವರು ಮರು ದಿವಸ ಬೆಳಿಗ್ಗೆ ಹೋಗಿ ನೋಡಿದಾಗ ಅವರು ಪೋಲೀಸ್ ಸ್ಟೇಷನ್ನಿನ ಆಚೆಕಡೆ ಮಲಗಿದ್ದು ಕಂಡುಬಂದ ಮೇಲೆ, ಆ ಊರಿನವರೇ ಅವರಿಗೆ ಊಟ, ತಿಂಡಿಕೊಟ್ಟು ಕರೆದುಕೊಂಡು ಬಂದು ಆಸ್ಪತ್ರೆಗೆ ಸೇರಿಸಿದ್ದಾರೆ. ಆ ಊರಿನ ಅನೇಕ ಜನ ಇವತ್ತಿನ ದಿವಸ ಮುಖ್ಯಮಂತ್ರಿಗಳವರಿಗೂ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇಲ್ಲಿಯವರೆಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಆ ಎ.ಎಸ್.ಐ. ವಿರುದ್ಧ ಕಂಪ್ಲೆಂಟ್ ದಾಖಲೆ ಮಾಡಿಕೊಂಡು, ಅವನನ್ನು ಮೊದಲು ಆ ಊರಿನಿಂದ ಹೊರಗಡೆ ವರ್ಗಾವಣೆ ಮಾಡಬೇಕು ಇಲ್ಲದೇಹೋದರೆ ಅಲ್ಲಿ ರಕ್ತಪಾತವಾಗಬಹುದು, ಪರಿಸ್ಥಿತಿ ಅಷ್ಟು ಗಂಭೀರವಾಗಿದೆ, ಆದುದರಿಂದ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಈಗತಾನೆ ವಿಚಾರವನ್ನು ಹೇಳಿದ್ದಾರೆ....

ಶ್ರೀ ಜೆ. ಡಿ. ಸೋಮಪ್ಪ.— ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಸರ್ವಜ್ಞ ಮಂತ್ರಿಗಳು ಎಂದ ಹೆಸರು ಇಟ್ಟುಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.— ಅವರಿಗೆ ಎಲ್ಲಾ ಮಂತ್ರಿಗಳ ಅಧಿಕಾರವಿದೆ, ಅವರು ಪಾರ್ಲಿಮೆಂಟರಿ ಮಿನಿಸ್ಟರ್.

ಮಾನ್ಯ ಅಧ್ಯಕ್ಷರೆ, ಈ ಮಾಸ್ತಿ ಅಪ್ಪಣ್ಣನಾಯಕ್ ಅವರನ್ನು ಮನೆಯಿಂದ ತೆಗೆದುಕೊಂಡು ಹೋಗಿ ಥಳಿಸಿದರು ಎನ್ನುತಕ್ಕ ಆರೋಪ ಬಂದಿದೆ. ಇದರ ಬಗ್ಗೆ ಇನ್ನೂ ವಿವರ ಸಿಕ್ಕಿಲ್ಲ. ಕಾರವಾರದಿಂದ ಎಸ್. ಪಿ. ಅವರನ್ನು ಕಳಿಸಿದ್ದೇವೆ. ಅವರು ಖುದ್ದಾಗಿ ತನಿಖೆ ಮಾಡುತ್ತಾರೆ. ಏನಾದರೂ ಸ್ಥಾನಿಕ ಪೋಲೀಸ್ ಅಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ವರ್ತಿಸಿದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

4. ವಿಷಯ : ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಮೀಸಲಿಟ್ಟ ಜಾಗವನ್ನು ಖಾಸಗಿ ವ್ಯಕ್ತಿಗಳಿಗೆ ಹಂಚಿರುವ ಬಗ್ಗೆ.

ಡಾ. ಎಂ. ಪಿ. ಕರ್ಕಿ (ಕುಮಟಾ).— ಮಾನ್ಯ ಅಧ್ಯಕ್ಷರೆ, ಭಟ್ಕಳ್ ತಾಲ್ಲೂಕಿನ ಸೂಗಡಿಗ್ರಾಮದ ಸರ್ವೆ ನಂ. 353 ಆಃಬ ಕ್ಷೇತ್ರ 13-9-0ವುಳ್ಳ ಸ್ಥಳವನ್ನು ಮೆ:ವಿ:ಸಾಬ್ರ 10701ನೇ ಪ್ರಕಾರ ಭಟ್ಕಳದ ಜನರಲ್ ಆಸ್ಪತ್ರೆ ಕಟ್ಟಡದ ಬಗ್ಗೆ ಆರೋಗ್ಯ ಖಾತೆಗೆ ಬಿಟ್ಟುಕೊಟ್ಟಿದ್ದು ಇದೆ. ಆ ಬಗ್ಗೆ ಮ್ಯೂ: ವಿ: 19701 ದಿನಾಂಕ 1-2-66ರಿಂದಲೇ ಜಾರಿಯಲ್ಲಿದೆ. ದೌರ್ಹ ಪತ್ರಿಕೆಯ ಕಾಲಂ ನಂ. 6 ಹಾಗೂ ಕಾಲಂ ನಂ. 11ರಲ್ಲಿ ಅನುಕ್ರಮವಾಗಿ ಆರೋಗ್ಯ ಖಾತೆಗೆ ಮತ್ತು ಭಟ್ಕಳದ ಜನರಲ್ ಆಸ್ಪತ್ರೆಗೆ ಸದರಿ ಸ್ಥಳ ಮೀಸಲಿಟ್ಟ ಬಗ್ಗೆ ನಮೂದಿಸಲಾಗಿದೆ. ಹೀಗಿರುತ್ತ, ಆರೋಗ್ಯ ಖಾತೆಯ ಒಪ್ಪಿಗೆ ಪಡೆಯದೆಯೇ ಕಂದಾಯ ಖಾತೆಯವರು ಭಟ್ಕಳ್‌ದಲ್ಲಿಯ 21 ಜನ ಖಾಸಗಿಯವರಿಂದ ಅರ್ಜಿಪಡೆದು ದಿನಾಂ 2-11-82ನೇ ರಂದು 7 ಜನರುಗಳಿಗೆ ನಂ. ಆರ್‌ಬಿಎಲ್‌ಎನ್‌ಡಿ-ಬಿ.ಎಸ್.ಆರ್.-288 ಇತ್ಯಾದಿಯಂತೆ ಮತ್ತು ದಿನಾಂಕ 3-12-82ರಂದು 7 ಜನರಿಗೆ ನಂ. ಎಲ್‌ಎನ್‌ಡಿಬಿ-ಎಸ್‌ಆರ್-28